# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ | : | 571 |
| ಸದಸ್ಯರ ಹೆಸರು | : | ಶ್ರೀ ಶರಣಗೌಡ ಬಯ್ಯಾಪುರ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.07.2024 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ಬಿಸಿಯೂಟ ವಿತರಿಸುತ್ತಿದ್ದು, ಸಂಪೂರ್ಣ ಪ್ರಮಾಣದಲ್ಲಿ ಶಾಲೆಗಳಿಗೆ ಸರಿಯಾಗಿ ದಾಸ್ತಾನು ಸರಬರಾಜು ಆಗುತ್ತಿಲ್ಲದಿರುವುದರಿಂದ ಪ್ರೌಢಶಾಲಾ ಮುಖ್ಯ ಗುರುಗಳು ತುಂಬಾ ತೊಂದರೆಯನ್ನು ಅನುಭವಿಸುತ್ತಿರುವ ವಿಚಾರ ಸರ್ಕರದ ಗಮನಕ್ಕೆ ಬಂದಿದೆಯೇ; | ಮಧ್ಯಾಹ್ನ ಉಪಹಾರ ಯೋಜನೆಯಡಿ 1 ರಿಂದ 8ನೇ ತರಗತಿಗಳಿಗೆ ಅಗತ್ಯವಿರುವ ಅಕ್ಕಿ ಹಾಗೂ ಗೋಧಿಯನ್ನು ಕೇಂದ್ರ ಸರ್ಕಾರವು ಭಾರತೀಯ ಆಹಾರ ನಿಗಮದಿಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ–2013 ಯಂತೆ ರಿಯಾಯಿತಿ ದರದಲ್ಲಿ ಸರಬರಾಜು ಮಾಡಲಾಗುತ್ತದೆ.<br><br>9 ಮತ್ತು 10ನೇ ತರಗತಿಗಳಿಗೆ ಅಗತ್ಯವಿರುವ ಸಾಮಾನ್ಯ ಅಕ್ಕಿ, 1 ರಿಂದ 10ನೇ ತರಗತಿಗಳಿಗೆ ಅಗತ್ಯವಿರುವ ತೊಗರಿಬೇಳೆ ಹಾಗೂ ಸೂರ್ಯಕಾಂತಿ ಎಣ್ಣೆಯನ್ನು ರಾಷ್ಟ್ರೀಯ ಸರಕು ಮತ್ತು ಉತ್ಪನ್ನಗಳ ವಿನಿಮಯ ಸಂಸ್ಥೆಯ ಮುಖಾಂತರ ಟೆಂಡರ್ ಕರೆದು ಸರಬರಾಜು ಪಡೆಯಲಾಗುತ್ತದೆ.<br><br>2024–25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳನ್ನು 30 ಮೇ 2024 ರಿಂದ ಪ್ರಾರಂಭಿಸಿ ಶಾಲೆಗಳಲ್ಲಿ ಬಿಸಿಯೂಟವನ್ನು ನೀಡಲಾಗುತ್ತಿದೆ. ಶಾಲೆಗಳಲ್ಲಿ ಬಿಸಿಯೂಟ ನೀಡಲು ಲಭ್ಯವಿದ್ದ ಆಹಾರ ಧಾನ್ಯಗಳ ಬಫರ್ ದಾಸ್ತಾನು ನಿಂದ ಯೋಜನೆಯನ್ನು ನಿರ್ವಹಿಸಲಾಗಿದೆ.<br><br>2024–25ನೇ ಸಾಲಿನಲ್ಲಿ ಭಾರತೀಯ ಆಹಾರ ನಿಗಮದಿಂದ ಮೊದಲನೇ ತ್ರೈಮಾಸಿಕ ಅವಧಿಗೆ 1 ರಿಂದ 8ನೇ ತರಗತಿಯ ವಿದ್ಯಾರ್ಥಿಗಳ ಬಿಸಿಯೂಟಕ್ಕೆ ರಾಜ್ಯಕ್ಕೆ ಹಂಚಿಕೆಯಾಗಿದ್ದ ಸಾರವರ್ಧಿತ ಅಕ್ಕಿ ಮತ್ತು ಗೋಧಿಯನ್ನು ಜಿಲ್ಲಾವಾರು ಬೇಡಿಕೆಯಂತೆ ಮರುಹಂಚಿಕೆ ಮಾಡಿ ಎತ್ತುವಳಿಮಾಡಲಾಗಿದ್ದು, ಶಾಲೆಗಳಿಗೆ ಸರಬರಾಜು ಮಾಡಲಾಗಿದೆ.<br><br>2024–25ನೇ ಸಾಲಿನಲ್ಲಿ 9 ಮತ್ತು 10ನೇ ತರಗತಿಗಳಿಗೆ ಜೂನ್–2024 ಮತ್ತು ಜುಲೈ–2024ರ ಮಾಹೆಗಳಿಗೆ ಬಿಸಿಯೂಟ ನೀಡಲು ಅಗತ್ಯವಿದ್ದ ಸಾಮಾನ್ಯ ಅಕ್ಕಿಯನ್ನು, 1 ರಿಂದ 10ನೇ |
| ಆ) | ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | |

| | | |
|---|---|---|
| | | ತರಗತಿಗಳಿಗೆ ಜೂನ್-2024 ಮತ್ತು ಜುಲೈ-2024ರ ಮಾಹೆಗಳಿಗೆ ಬಿಸಿಯೂಟ ನೀಡಲು ಅಗತ್ಯವಿದ್ದ ಸೂರ್ಯಕಾಂತಿ ಎಣ್ಣೆಯನ್ನು ಹಾಗೂ ಮೇ-2024 ಮತ್ತು ಜೂನ್-2024ರ ಮಾಹೆಗಳಿಗೆ ಬಿಸಿಯೂಟ ನೀಡಲು ಅಗತ್ಯವಿದ್ದ ತೊಗರಿಬೇಳೆಯನ್ನು ಶಾಲೆಗಳ ಬೇಡಿಕೆಗೆ ಅನುಗುಣವಾಗಿ ಸರಬರಾಜು ಮಾಡಲಾಗಿದೆ.<br><br>ರಾಜ್ಯದ 14 ಜಿಲ್ಲೆಗಳಲ್ಲಿ ಸ್ವಯಂಸೇವಾ ಸಂಸ್ಥೆಗಳು ಒಡಂಬಡಿಕೆಯ ಮೂಲಕ ಸಿದ್ಧಪಡಿಸಿದ ಬಿಸಿಯೂಟವನ್ನು ಶಾಲೆಗಳಿಗೆ ಸರಬರಾಜುಗೊಳಿಸಲಾಗುತ್ತಿದೆ.<br><br>ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಬಿಸಿಯೂಟವನ್ನು ಶಾಲಾ ಮಕ್ಕಳಿಗೆ ನಿರಂತರವಾಗಿ ನೀಡಲಾಗುತ್ತಿದ್ದು, ಆಹಾರ ಧಾನ್ಯಗಳ ಕೊರತೆ ಇರುವುದಿಲ್ಲ. |

ಇಪಿ 64 ಎಂಎಂಎಸ್ 2024

**(ಎಸ್.ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**